**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ, ಶ್ರೀ ಭೀಮರಾವ್ ಪಾಟೀಲ್ ಮತ್ತು ಶ್ರೀ ಚಂದ್ರುಶೇಖರ ಪಾಟೀಲ್ ಇವರ ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.**

**ವಿಷಯ:**

ರಾಜ್ಯದಲ್ಲಿ ಸುಮಾರು 35 ಲಕ್ಷ ಜನಪದ, ರಂಗಭೂಮಿ ಕಲಾವಿದರಿದ್ದು, ಸಂಘ ಸಂಸ್ಥೆಗಳಿಗೆ, ಧನಸಹಾಯ, ವಾದ್ಯಪರಿಕರ ವೇಷಭೂಷಣ ಖರೀದಿಗೆ, ನಾಟಕಗಳಿಗೆ ಧನಸಹಾಯ, ಹಿರಿಯ ಕಲಾವಿದರಿಗೆ ಮಾಸಾಶನವನ್ನು 5000ರೂ.ಗಳಿಗೆ ಹೆಚ್ಚಿಸುವುದು. ಅಕಾಲಿಕ ಅವಘಡ ಮರಣ ಹೊಂದಿದ ಕಲಾವಿದರ ಕುಟುಂಬಕ್ಕೆ ಪರಿಹಾರಧನ ನೀಡುವುದು. ಕಲಾವಿದರನ್ನು ವಸತಿ ಯೋಜನೆಯ ವಿಶೇಷ ಘಟಕಕ್ಕೆ ಸೇರಿಸುವುದು. ಗ್ರಾಮೀಣ ಕಲಾವಿದರು ಬಹುತೇಕ ಅವಿದ್ಯಾವಂತರಾಗಿದ್ದು, ಆಫ್‌ಲೈನ್‌ನಲ್ಲಿಯೂ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡುವುದು. ಕಲಾವಿದರ ಗುರುತಿನ ಚೀಟಿಯನ್ನು ನೀಡಲು ಕರ್ನಾಟಕ ರಾಜ್ಯ ಕಲಾವಿದರ ಒಕ್ಕೂಟ (ರಿ) ಇವರು ಅನೇಕ ಬಾರಿ ಮನವಿಗಳನ್ನು ಸಲ್ಲಿಸಿರುವುದನ್ನು ಮನಗಂಡು ಹಾಲಿ ಇರುವ ಇಲಾಖೆಯ ವಿವಿಧ ಯೋಜನೆಗಳಿಗೆ ಕ್ರಿಯಾಯೋಜನೆಯಲ್ಲಿ ಅನುದಾನವನ್ನು ಹೆಚ್ಚಿಗೆ ನಿಗದಿಪಡಿಸಿಕೊಂಡು ಸಾಂಸ್ಕೃತಿಕ ವಲಯವನ್ನು ಮತ್ತಷ್ಟು ಉತ್ಕೃಷ್ಟಗೊಳಿಸಲು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಿಂದ ಮಾಹಿತಿಯನ್ನು ಬಯಸಿ ಗಮನಸೆಳೆಯ ಬಯಸುತ್ತೇನೆ.

**ಉತ್ತರ:**

ನಾಡಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಿ ಪ್ರೋತ್ಸಾಹಿಸಿಕೊಂಡು ಬರುವ ಕೆಲಸವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಡಲಾಗುತ್ತಿದೆ. ಕ್ರಿಯಾತ್ಮಕ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುವ ಅರ್ಹ ನೊಂದಾಯಿತ ಸಂಘ ಸಂಸ್ಥೆಗಳಿಗೆ ಇಲಾಖೆಯು ಪ್ರತಿ ವರ್ಷ ಪ್ರೋತ್ಸಾಹ ರೂಪದಲ್ಲಿ ಸಹಾಯಧನವನ್ನು ಮಾರ್ಗಸೂಚಿಯನುಸಾರ ಅರ್ಜಿ ಆಹ್ವಾನಿಸಿ ಸಂಘ ಸಂಸ್ಥೆಗಳು/ ಟ್ರಸ್ಟ್‌ಗಳು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ಅರ್ಹ ಸಂಸ್ಥೆಗಳಿಗೆ ಧನಸಹಾಯ ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ:ಕಸಂವಾ 154 ಕಸಧ 2022, ದಿನಾಂಕ:23.06.2022 ಹಾಗೂ ತಿದ್ದುಪಡಿ ಆದೇಶ ದಿನಾಂಕ:02.01.2023ರ ಮಾರ್ಗಸೂಚಿಯನ್ವಯ ನೊಂದಾಯಿತ ಸಂಘ ಸಂಸ್ಥೆಗಳು/ ಟ್ರಸ್ಟ್‌ಗಳಿಗೆ ಧನಸಹಾಯಕ್ಕಾಗಿ ಸೇವಾಸಿಂಧು ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಸೇವಾ ಸಿಂಧು ತಂತ್ರಾಂಶದಲ್ಲಿ ತಪ್ಪಾಗಿ ಅಪ್‌ಲೋಡ್ ಆಗಿದ್ದಲ್ಲಿ, ಅಥವಾ ದಾಖಲೆಗಳು ಅಪೂರ್ಣವಾಗಿ ಸಲ್ಲಿಕೆಯಾಗಿದ್ದಲ್ಲಿ ಅಪ್‌ಲೋಡ್ ಮಾಡಲು ಕಾಲಾವಕಾಶ ನೀಡಲಾಗುತ್ತದೆ ಹಾಗೂ ತಾಂತ್ರಿಕವಾಗಿ ಅಪ್‌ಲೋಡ್ ಆಗದಿದ್ದಲ್ಲಿ ಸಂಸ್ಥೆಯವರಿಂದ ಭೌತಿಕವಾಗಿ ದಾಖಲೆಗಳನ್ನು ಪಡೆಯಲು ಮಾರ್ಗಸೂಚಿಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

ವಾದ್ಯಪರಿಕರ ವೇಷಭೂಷಣ ಖರೀದಿಗೆ ಸಂಬಂಧಪಟ್ಟಂತೆ ಧನಸಹಾಯ ನೀಡುವ ಕುರಿತು ಇಲಾಖೆಯಲ್ಲಿ ಪ್ರತ್ಯೇಕ ಯೋಜನೆ ಇರುವುದಿಲ್ಲ. ಆದರೆ ಪ್ರಕರಣವಾರು ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಧನಸಹಾಯ ನೀಡುವ ಯೋಜನೆಯಡಿ ಪರಿಗಣಿಸಿ ಅನುದಾನ ನೀಡಲಾಗುತ್ತದೆ. ಅಲ್ಲದೇ, ವಿವಿಧ ಇಲಾಖೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ವಿವಿಧ ವಸತಿ ಯೋಜನೆಗಳಡಿ ಮನೆ ನಿರ್ಮಾಣ ಯೋಜನೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ. ಉದಾ: ಡಾ. ಬಿ.ಆರ್. ಅಂಬೇಡ್ಕರ್ ಆವಾಸ್ ಯೋಜನೆ, ರಾಜೀವ್ ಗಾಂಧಿ ವಸತಿ ಯೋಜನೆ, ಬಸವ ವಸತಿ ಯೋಜನೆ ಮುಂತಾದವು ಆಗಿರುತ್ತದೆ. ಆದ್ದರಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕಲಾವಿದರಿಗೆ ವಸತಿ ಯೋಜನೆ ಇರುವುದಿಲ್ಲ.

ಸಾಹಿತಿ/ಕಲಾವಿದರಿಗೆ ಪ್ರಸ್ತುತ ರೂ.2000/-ಗಳ ಮಾಸಾಶನವನ್ನು ಪಾವತಿಸಲಾಗುತ್ತಿದ್ದು; ಕಲಾವಿದರುಗಳಿಗೆ ನಿಯಮಾನುಸಾರ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡಲಾಗುತ್ತಿದೆ. ಕಳೆದ ಸಾಲಿನಲ್ಲಿ ಕಲಾವಿದರ ಗುರುತಿನ ಚೀಟಿ ನೀಡಲು ಸೇವಾಸಿಂಧುವಿನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸ್ವೀಕೃತವಾದ ಅರ್ಜಿಗಳಲ್ಲಿ ಆಯ್ಕೆಯಾದ 16,566 ಅರ್ಜಿಗಳಿಗೆ ಸಂಬಂಧಿದಂತೆ, ಮೊದಲನೇಯ ಕಂತಾಗಿ ರಾಮನಗರ ಜಿಲ್ಲೆಯ 230, ಬೆಂಗಳೂರು ನಗರದ 406, ಶಿವಮೊಗ್ಗ 267, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 458 ಹಾಗೂ ಬೆಳಗಾವಿ ಜಿಲ್ಲೆಯ 1,456 ಜನ ಕಲಾವಿದರ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ. ಎರಡನೇ ಕಂತಾಗಿ 13,749 ಜನ ಕಲಾವಿದರ ಗುರುತಿನ ಚೀಟಿಗಳನ್ನು ವಿತರಿಸುವ ವ್ಯವಸ್ಥೆಗೆ ಕ್ರಮ ಕೈಗೊಳ್ಳಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಆಯವ್ಯಯದಲ್ಲಿ ಹಂಚಿಕೆಯಾಗುವ ಅನುದಾನ ಮಿತಿಯಲ್ಲಿ ಇಲಾಖೆಯಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿಕೊಂಡು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

ಸಂಖ್ಯೆ: ಕಸಂವಾ 29 ಕವಿಸ 2024.

(ಶಿವರಾಜ ಎಸ್.ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.